॥ ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ॥

# ಗೀತಾಜ್ಯೋತಿ













**ಶ್ರೀ ಭಗವತ್ಪಾದ ಪ್ರಕಾಶನ**
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನಮ್
ಮಠದೇವಳ, ಶಿರಸಿ (ಉ.ಕ.) - 581 336

# ಸಂಪಾದಕೀಯ

## ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥ ಶರ್ಮಾ

ಭಗವದ್ಗೀತೆಯು ಭಾರತೀಯರಾದ ನಮಗೆ ಪವಿತ್ರಗ್ರಂಥ ಮಾತ್ರವಲ್ಲದೆ ಪುರುಷಾರ್ಥ ಚತುಷ್ಟಯವನ್ನು ವ್ಯವಸ್ಥಿತವಾಗಿ ಬೋಧಿಸುವ ಶ್ರೇಷ್ಠ ಗ್ರಂಥ. ಇಂತಹ ಒಂದು ಗ್ರಂಥವು ಜಗತ್ತಿನ ಇನ್ನೊಂದು ದೇಶದಲ್ಲಿ ಉದಿಸಲಿಲ್ಲ ಎಂದರೆ ಅತಿಶಯೋಕ್ತಿ ಯೇನಾಗುವುದಿಲ್ಲ.

ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇಮಹಾಭಾರತಮ್ । ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾಧ್ಯಾಯಿನೀಂ ಅಂಬ ತ್ವಾಮನುಸಂದಧಾಮಿ ಭಗವದ್ಗೀತೇ ! ಭವದ್ವೇಷಿಣೀಮ್ ॥

ಈ ಶ್ಲೋಕವು ಪ್ರಕೃತದಲ್ಲಿ ಹೇಳಬೇಕಾದ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಭಗವಂತನೇ ಉಪದೇಶಿಸಿದ್ದು 'ಭಗವದ್ಗೀತೆ' ಎನಿಸಿತು. ಆತನ ಉಕ್ತಿಗಳನ್ನು ಸಂಗ್ರಹಿಸಿ ವ್ಯಾಸಮಹರ್ಷಿಗಳು ಮಹಾಭಾರತದ ನಡುವೆ ಸೇರಿಸಿದ್ದಾರೆ. ಹದಿನೆಂಟು ಅಧ್ಯಾಯಗಳಲ್ಲಿ ಪುರುಷಾರ್ಥಗಳೆನಿಸಿದ ಧರ್ಮಾರ್ಥಕಾಮಮೋಕ್ಷಗಳನ್ನು ಸಂಕ್ಷೇಪವಾಗಿ ಆದರೂ ಸ್ಪಷ್ಟವಾಗಿ ನಿರೂಪಿಸಲಾಗಿದೆ. ಇದು ಉಪನಿಷತ್ತುಗಳ ಸಾರವಾಗಿದೆ.

ಮಾನವನು ತನ್ನ ಅಭ್ಯುದಯಕ್ಕಾಗಿ ಪ್ರಯತ್ತಿಸುತ್ತಿರುವುದು ಪ್ರಕೃತಿಸಿದ್ಧ. ಲೌಕಿಕ ಸುಖಗಳ ಭೋಗರೂಪವಾದ ಅಭ್ಯುದಯವು ಅರ್ಥಕಾಮಗಳನ್ನು ಅವಲಂಬಿಸಿರುವುದರಿಂದ ಅವುಗಳ ಪ್ರಾಪ್ತಿಗಾಗಿ ಮಾನವನು ನಾನಾ ಮಾರ್ಗಗಳನ್ನು ಅನುಸರಿಸುತ್ತಾನೆ. ಮಾರ್ಗಾನುಸರಣೆಯಲ್ಲಿ ಸಹಜವಾದ ಮೋಹಕ್ಕೆ ಒಳಗಾಗಿ ಮುಗ್ಗರಿಸುತ್ತಾನೆ. "ಈ ಹಂತೇ ಕಾಮಭೋಗಾರ್ಥಮ ನ್ಯಾಯೇನಾರ್ಥಸಂಚಯಾನ್" ಎಂಬ ಗೀತೋಕ್ತಿಯಂತೆ ಅನ್ಯಾಯ ಮಾರ್ಗಕ್ಕೆ ಇಳಿಯುವುದೇನೂ ಅಪೂರ್ವವಲ್ಲ. ಅನ್ಯಾಯ ಮಾರ್ಗದಿಂದ ಪರರಿಗೆ ಕಷ್ಟವೂ, ಪರಿಣಾಮದಲ್ಲಿ ಸಮಾಜಕ್ಕೆ ದುಸ್ಥಿತಿಯೂ ಪ್ರಾಪ್ತವಾಗುವುದಲ್ಲದೇ, ತನ್ನ ಇಹಪರಸೌಖ್ಯಗಳಿಗೂ ಭಂಗವಾಗುತ್ತದೆಂಬುದು ಹೊಳೆಯುವುದಿಲ್ಲ. ಹೊಳೆದರೂ 'ಬಲಾದಿವ ನಿಯೋಜಿತಃ' ಎಂಬಂತೆ ಅನ್ಯಾಯಮಾರ್ಗದಲ್ಲಿಯೇ ಸಾಗುತ್ತಾನೆ. ಈ ಅನ್ಯಾಯದ ಮಾರ್ಗವನ್ನು ತಪ್ಪಿಸಲು ತನ್ನ ದಾರಿಯು ಅಧರ್ಮದಿಂದ ತುಂಬಿದೆಯೆಂಬುದು ಚಿತ್ತಕ್ಕೆ ಹೊಳೆಯಬೇಕಾಗಿದೆ,

ಇದಕ್ಕೆ ಧರ್ಮದ ಜ್ಞಾನವು ಅತ್ಯಾವಶ್ಯಕವೆಂದೂ, ತಾನು ಅನುಸರಿಸುತ್ತಿರುವುದು ಅಧರ್ಮದ ದಾರಿಯೆಂದೂ ಸ್ಪಷ್ಟವಾಗಿ ಗೋಚರಿಸಬೇಕು. ಆಗ ಶಾಸ್ತ್ರದ ಒತ್ತಡದಿಂದ ಧರ್ಮಜ್ಞಾನದ ಬೆಳಕು ಮಾತ್ರ ಚಿತ್ತಕ್ಕೆ ಗೋಚರಿಸಿ ಚಿತ್ತ ಶುದ್ಧಿಯನ್ನುಂಟು ಮಾಡಲು ಸಹಕಾರಿಯಾಗುತ್ತದೆ. ಶ್ರೀ ರಾಮನು ವಾಲಿಯನ್ನುದ್ದೇಶಿಸಿ ವಾಲ್ಮೀಕಿ ರಾಮಾಯಣದಲ್ಲಿ ಹೀಗೆ ಹೇಳುತ್ತಾನೆ– 'ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ ಪ್ಲವಂಗಮ' (ವಾ.ರಾ.ಕಿ.ಕಾಂಡ 18–15) ಎಂದು. ಹೀಗೆ ಪರಮದುರ್ಜ್ಞೇಯವಾದದ್ದು ಜ್ಞೇಯವಾಗುವುದು ಗುರುಶುಶ್ರೂಷೆಯಿಂದ ಮತ್ತು ಜನ್ಮಾಂತರ ಸಂಸ್ಕಾರಬಲದಿಂದಲೇ ಎಂದು ತಿಳಿಯಬೇಕು.

ಧರ್ಮಾರ್ಥಕಾಮಗಳೆಂಬ ತ್ರಿವರ್ಗದ ಜ್ಞಾನವಾಗಿ ಧರ್ಮದಿಂದಲೇ ಅರ್ಥಕಾಮಗಳನ್ನು ಸಾಧಿಸಬೇಕೆಂದು ಪ್ರವೃತ್ತನಾಗುವುದೇ ಮನುಷ್ಯನ ಅಭ್ಯುದಯ ಮಾರ್ಗ. ಈ ಅಭ್ಯುದಯವೇ ಮೋಕ್ಷಕ್ಕೆ ದಾರಿ. "ಯತೋಽಭ್ಯುದಯನಿಃಶ್ರೇಯಸ ಸಿದ್ಧಿಃ ಸ ಧರ್ಮಃ" ಎಂಬುದಾಗಿ ಶಾಸ್ತ್ರವಚನವಿದೆ. ನಿಃಶ್ರೇಯಸವೆಂದರೆ ಮೋಕ್ಷ. ಯಾವುದಕ್ಕಿಂತ ಅಧಿಕವಾದ ಶ್ರೇಯಸ್ಸು ಇಲ್ಲವೋ ಅದೇ ನಿಃಶ್ರೇಯಸ. ಈ ಅಭ್ಯುದಯ ಮಾರ್ಗ ಮತ್ತು ಸಾಧ್ಯವಾದ ಮೋಕ್ಷ – ಇವೆರಡನ್ನೂ ಹೇಗೆ ಸಾಧಿಸಬೇಕೆಂದು ಒಂದೆಡೆಯಲ್ಲಿ ತಿಳಿಸಿ ಹೇಳಿರುವುದೇ ಭಗವದ್ಗೀತೆಯ ಒಂದು ಹೆಚ್ಚುಗಾರಿಕೆ.

ಮನುಷ್ಯನ ಚಿತ್ತವು ಇಹಲೋಕದ ಸುಖಕ್ಕಾಗಿ ಅರ್ಥಕಾಮಗಳ ಕಡೆಗೂ, ಶಾಸ್ತ್ರಬೋಧನೆಯಿಂದ ಮೋಕ್ಷದ ಕಡೆಗೂ ಹರಿಯುತ್ತದೆ. ಈ ಸಂದರ್ಭದಲ್ಲಿ ಇಂದ್ರಿಯಗಳನ್ನು ನಿಗ್ರಹಿಸಿ ಮೋಕ್ಷದ ಕಡೆಗೆ ಹರಿಯುವಂತೆ ಮಾಡುವುದು ಹೇಗೆ? ಇದು ದುಷ್ಕರವಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಹೌದು, ಇದು ದುಷ್ಕರವೇ ಆದರೂ ಹಠದಿಂದ ಅಭ್ಯಾಸ ವೈರಾಗ್ಯಗಳ ಮೂಲಕ ಇಂದ್ರಿಯ ನಿಗ್ರಹ ಸಾಧ್ಯವೆಂದು ಗೀತೆಯು ಬೋಧಿಸುತ್ತದೆ. ಇದನ್ನೇ ಶ್ರೀಕೃಷ್ಣನು "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ" (ಭಗವದ್ಗೀತಾ 6–35) ಎಂದು ಹೇಳಿ ಅಭ್ಯಾಸ, ವೈರಾಗ್ಯ ಎಂಬಿವು ಚಿತ್ತನಿಗ್ರಹಕ್ಕೆ ಆವಶ್ಯಕವೆಂದಿದ್ದಾನೆ. ಇದನ್ನೇ ಪಾತಂಜಲಯೋಗ ಸೂತ್ರವು "ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ" (ಯೋ.ಸೂ. 1–12) ಎಂದು ಹೇಳಿದೆ.

ಸಾಮಾನ್ಯವಾಗಿ ಮನುಷ್ಯನಲ್ಲಿ ರಜೋಗುಣವೇ ಅಧಿಕವಾಗಿರುತ್ತದೆ. ಅದು ಮನುಷ್ಯನನ್ನು ಅರ್ಥಕಾಮಗಳ ಕಡೆಗೇ ಬಲವಂತವಾಗಿ ದೂಡುತ್ತದೆ. ಆದ್ದರಿಂದ ಇಂದ್ರಿಯನಿಗ್ರಹವು ಕಠಿಣವೇ ಹೌದು. ಆದ್ದರಿಂದ ಭಗವದ್ಗೀತೆಯು ವಿಶೇಷವಾಗಿ ಕರ್ಮಮಾರ್ಗವನ್ನೇ ಬೋಧಿಸಿ, ಆ ಕರ್ಮವೇ ಇಂದ್ರಿಯನಿಗ್ರಹಕ್ಕೆ ಹೇಗೆ ಸಹಕಾರಿಯಾಗುತ್ತದೆಂಬುದನ್ನೂ ತಿಳಿಸಿಕೊಡುತ್ತದೆ.

ಭಗವಂತನಲ್ಲಿ ದೃಢವಾಗಿಟ್ಟಿರುವ ಭಕ್ತಿಯು ಭಕ್ತನ ಇಂದ್ರಿಯಗಳನ್ನು ಎಂದಿಗೂ ಪಾಪಕಾರ್ಯಕ್ಕೆ ದೂಡುವುದಿಲ್ಲ. ಆದ್ದರಿಂದ ಶ್ರೇಯಸ್ಸನ್ನು ಬಯಸುವ ಮನುಷ್ಯನು ಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನು ನೆಲೆಗೊಳಿಸಿ ಕರ್ತವ್ಯಕರ್ಮದಲ್ಲಿ ತೊಡಗಬೇಕು.

ಆಗ ಕ್ರಮವಾಗಿ ಚಿತ್ತವು ರಾಜಸ ತಾಮಸ ಭಾವನೆಗಳನ್ನು ಹೊರಕ್ಕೆ ದೂಡಿ ಚಿತ್ತವನ್ನು ಸಾತ್ವಿಕ ಭಾವದೆಡೆಗೆ ಕರೆದೊಯ್ಯುವುದು. ಒಂದು ಮಾತನ್ನು ನೆನೆಪಿನಲ್ಲಿಡಬೇಕು. ಇಂದ್ರಿಯನಿಗ್ರಹವು ಸುಲಭವಲ್ಲ. ಭಕ್ತನು ದೃಢಚಿತ್ತನಾಗಿ ರಾಜಸ ಭಾವನೆಗಳನ್ನು ಹೊರದೂಡಲು ಪ್ರಯತ್ತಿಸುತ್ತಿದ್ದರೆ ಒಂದು ದಿನ ಇಂದ್ರಿಯಗಳನ್ನು ನಿಗ್ರಹಿಸಲು ಸಾಧ್ಯವಾಗುತ್ತದೆ. ಇದು ಭಗವಂತನ ಅನುಗ್ರಹ.

ಶ್ರೀಕೃಷ್ಣನು ಗೀತೆಯ ಮೂರನೆಯ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾನೆ :

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ । ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ (ಭ.ಗೀತಾ 3-22)

ಪಾರ್ಥ ! ಮೂರು ಲೋಕಗಳಲ್ಲಿಯೂ ನಾನು ಮಾಡಬೇಕಾದ ಕರ್ತವ್ಯ ಕರ್ಮವು ಯಾವುದೂ ಇಲ್ಲ. ಏಕೆಂದರೆ, ನನಗೆ ಅಪ್ರಾಪ್ತವಾದ ಯಾವುದನ್ನೂ ಪಡೆಯಬೇಕಾಗಿಲ್ಲ. ಆದರೂ ನಾನು ಕರ್ಮದಲ್ಲಿ ತೊಡಗಿಯೇ ಇರುತ್ತೇನೆ.

ಏವಂ ಚ ಮೋಕ್ಷವನ್ನು ಬಯಸತಕ್ಕವನು ಇಂದ್ರಿಯನಿಗ್ರಹವನ್ನು ಸಾಧಿಸದೇ ಕರ್ತವ್ಯಕರ್ಮಗಳನ್ನು ತ್ಯಜಿಸಿ ಒಮ್ಮೆಯೇ ವೈರಾಗ್ಯವನ್ನು ಪಡೆದವನೋ ಎಂಬಂತೆ ವರ್ತಿಸುವುದು ಯುಕ್ತವಲ್ಲ ಎಂಬುದೇ ಭಗವದ್ಗೀತೆಯ ಬೋಧನೆಯೆಂದು ತಿಳಿಯಬೇಕು. ಆದ್ದರಿಂದಲೇ "ಕುರು ಕರ್ಮೈವ ತಸ್ಮಾತ್ ತ್ವಂ " "ಯುಧ್ಯಸ್ವ ವಿಗತಜ್ವರಃ" ಎಂದು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶಿಸಿದ್ದಾನೆ. ಆದ್ದರಿಂದಲೇ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" ಎಂಬ ಉಪದೇಶವು ಸಾರ್ಥಕವಾಗುತ್ತದೆ, ಮೋಕ್ಷಮಾರ್ಗದಲ್ಲಿ ಹೋಗತಕ್ಕ ಸಾಧಕನಿಗೆ ಈ ಉಪದೇಶ, ಸರ್ವರಿಗೂ ಅಲ್ಲ. "ಫಲದ ಆಶೆಯಿಲ್ಲದೇ ಯಾರು ಕರ್ಮ ಮಾಡುತ್ತಾರೆ" ಎಂದು ಕೇಳುವುದು ಅಜ್ಞಾನವಿಜೃಂಭಿತವಾದದ್ದು.

ಆದರೆ ಕರ್ಮದಿಂದಲೇ ಮೋಕ್ಷಸಾಧನೆಯಾಗುವುದಿಲ್ಲ. "ಜ್ಞಾನಾನ್ಮುಕ್ತಿರ್ನಕರ್ಮಣಾ" ಮುಂತಾದ ಸಕಲವಚನಗಳೂ ಆತ್ಮ ಜ್ಞಾನದಿಂದಲೇ ಮುಕ್ತಿಯೆಂದು ನಿಶ್ಚಯಿಸಿ ಹೇಳಿವೆ. ನಿಷ್ಕಾಮಕರ್ಮದಿಂದ ಚಿತ್ತಶುದ್ಧಿ. ನಾನಾ ಜನ್ಮಗಳಲ್ಲಿ ಮಾಡಿದ ಕರ್ಮಗಳಿಂದ ನಮ್ಮ ಚಿತ್ತವು ಕೊಳೆಯಾಗಿರುತ್ತದೆ. ಕಾಮ ಕ್ರೋಧಾದಿಗಳೇ ಚಿತ್ತಕ್ಕೆ ಅಂಟಿದ ಕೊಳೆ. ನಿಷ್ಕಾಮ ಕರ್ಮಗಳಿಂದ ಮತ್ತು ಭಗವದ್‌ಭಕ್ತಿ ಯಿಂದ ಚಿತ್ತದ ಈ ಕೊಳೆಯು ಕ್ರಮವಾಗಿ ನಶಿಸುತ್ತಾ ಹೋಗುವುದು. ಕೊಳೆಯೆಲ್ಲವೂ ತೊಲಗಿ ಹೋಗುವುದೇ ಚಿತ್ತಶುದ್ಧಿ. ಚಿತ್ತಶುದ್ಧಿಯಾದ ಮೇಲೆ ಜ್ಞಾನದ ಉದಯ. ಜ್ಞಾನವೆಂದರೆ ಆತ್ಮಜ್ಞಾನ. ಇದೇ ಬ್ರಹ್ಮಜ್ಞಾನ. ನಮ್ಮ ಆತ್ಮವೇ ಬ್ರಹ್ಮ ಎಂಬುದು ಸಕಲ ಉಪನಿಷತ್ತುಗಳ ಬೋಧನೆಯಾಗಿದೆ. ಏವಂ ಚ ನಿಷ್ಕಾಮ ಕರ್ಮ, ಭಕ್ತಿ, ಮೋಕ್ಷ ಎಂಬ ಮೂರು ಕ್ರಮವಾಗಿ ಸಾಧಿಸಬೇಕಾದವು.

ಭಕ್ತ್ಯಾ ಮಾಮಭಿಜಾನಾತಿ ಯಾವಾನ್‌ಯಶ್ಚಾಸ್ಮಿ ತತ್ತ್ವತಃ । ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್ ॥ ಗೀತಾ 18-55

ಈ ಶ್ಲೋಕದ ತಾತ್ಪರ್ಯವೇಂದರೆ – ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ಕರ್ತವ್ಯಕರ್ಮಗಳಲ್ಲಿ ತೊಡಗಬೇಕು. ನಿರ್ದಿಷ್ಟವಾದ ಫಲದ ಆಶೆಯನ್ನು ಬಿಡಬೇಕು. ಇದರಿಂದ ಕಾಮಕ್ರೋಧಾದಿ ಚಿತ್ತದ ಕೊಳೆಗಳು ನಶಿಸಿ ಚಿತ್ತವು ಶುದ್ಧವಾಗುತ್ತದೆ, ಚಿತ್ತಶುದ್ಧಿಯಿಂದ ಭಗವದ್‌ಭಕ್ತಿಯು ದೃಢವಾಗುತ್ತದೆ. ದೃಢವಾದ ಭಕ್ತಿಯೇ ಬ್ರಹ್ಮಜ್ಞಾನವೆಂಬ ಭವ್ಯಸೌಧದ ಮಹಾದ್ವಾರ. ಈ ದ್ವಾರದ ಮೂಲಕ ಒಳಗೆ ಪ್ರವೇಶಿಸುವುದೇ ಮೋಕ್ಷವೆಂದು ತಿಳಿಯಬೇಕು. ಇದನ್ನೇ ಭಗವದ್ಗೀತೆಯು ಏಳುನೂರು ಶ್ಲೋಕಗಳಿಂದ ವಿಸ್ತಾರವಾಗಿ ಉಪದೇಶಿಸಿದೆ. ಇಹ ಪರಗಳೆಂಬ ಎರಡು ಲೋಕಗಳ ಸ್ವರೂಪವನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದೇ ಮನುಷ್ಯನ ಗುರಿ. ಅರ್ಥಕಾಮಗಳು ಮನುಷ್ಯ ಜನ್ಮದ ಗುರಿ ಅಲ್ಲ. ಅವು ಎಂದಿಗೂ ಪೂರ್ಣವಾಗತಕ್ಕವಲ್ಲ, ಮತ್ತೆ ಮತ್ತೆ ಸಂಸಾರಕ್ಕೆ ದೂಡುವ ಅನರ್ಥಕಾರಿಗಳು. ಆದ್ದರಿಂದ ಅವನ್ನು ಗೆದ್ದು ದೂರಕ್ಕೆ ತಳ್ಳಿ ಧರ್ಮಮಾರ್ಗದಿಂದ ಮೋಕ್ಷವನ್ನು ಸಾಧಿಸಬೇಕು ಎಂಬುದೇ ಪರಮಾರ್ಥ. ಇದನ್ನು ಸುಲಭ ಶೈಲಿಯಲ್ಲಿ ತಿಳಿಸಿಕೊಡುವ ಪುಣ್ಯಗ್ರಂಥವೇ ಭಗವದ್ಗೀತೆ.

ಭಗವದ್ಗೀತೆಯಲ್ಲಿ ಪ್ರತಿಪಾದಿಸಿದ ನಿಷ್ಕಾಮಕರ್ಮ ಯೋಗವು ಸಕಲ ಮಾನವರೂ ಪಾಲಿಸಬೇಕಾದ ನೈತಿಕಮೌಲ್ಯಗಳನ್ನು ಒಳಗೊಳ್ಳುತ್ತದೆ. ಸತ್ಯ, ಪರೋಪಕಾರ, ಅಹಿಂಸೆ, ಸ್ವಾರ್ಥಪರಿತ್ಯಾಗ, ಮುಂತಾದ ಗುಣಗಳನ್ನು ಜನರು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂಬುದು ಕರ್ಮಯೋಗದ ಪ್ರಧಾನವಾದ ನೆಲಗಟ್ಟು.

ಶ್ರೀಸ್ವರ್ಣವಲ್ಲೀ ಸಂಸ್ಥಾನದ ಮಠಾಧೀಶ್ವರರಾದ ಶ್ರೀ ಶ್ರೀಗಳವರು ನಾಲ್ಕು ವರ್ಷಗಳ ಹಿಂದೆಯೇ ಇದೆಲ್ಲವನ್ನೂ ಪರಿಶೀಲಿಸಿ ಪ್ರಜೆಗಳಲ್ಲಿ ಮೊದಲು ಸದ್‌ಗುಣಗಳು ಬೆಳೆಯಲೆಂದು ಈ ಭಗವದ್ಗೀತಾಭಿಯಾನವನ್ನು ಆರಂಭಿಸಿದ್ದಾರೆ. ಮುಖ್ಯವಾಗಿ ಭಗವದ್ಗೀತೆಯ ಪ್ರಚಾರವೇ ಈ ಕಾರ್ಯಕ್ಕೆ ಉತ್ತಮವಾದ ಸಾಧನವೆಂದು ಇದನ್ನು ಆರಿಸಿಕೊಂಡಿರುವುದು ಪ್ರಶಂಸನೀಯವಾಗಿದೆ. ಈ ಅಭಿಯಾನದ ಹೆಚ್ಚಿನ ವಿವರಗಳನ್ನು ಡಾ. ಶ್ರೀರಾಮಭಟ್ಟರು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ತಮ್ಮ ಲೇಖನದಲ್ಲಿ ತಿಳಿಸಿಕೊಟ್ಟಿದ್ದಾರೆ.

ಅಭಿಯಾನ ಎಂದರೇನು? ಈ ಶಬ್ದಕ್ಕೆ ದಂಡಯಾತ್ರೆ ಎಂಬುದು ಸಾಮಾನ್ಯವಾದ ಅರ್ಥ. ದಂಡಯಾತ್ರೆಯು ದುಷ್ಟರ ದಮನಕ್ಕಾಗಿ ಶತ್ರುಗಳ ಮೇಲೆ ರಾಜರು ಸೈನ್ಯಸಮೇತ ನುಗ್ಗುವುದೇ ಆಗಿದೆ. ಪ್ರಕೃತದಲ್ಲಿ ಗೀತೆಯು ಹೇಳಿದ ಆಸುರೀ ಸಂಪತ್ತನ್ನು ನಿಗ್ರಹಿಸುವುದು ಎಂದರ್ಥ. ಒಂದು ಸತ್ಕಾರ್ಯವನ್ನು ಆರಿಸಿಕೊಂಡು ಅದರ ಪ್ರಚಾರಕ್ಕಾಗಿ ಹಲವಾರು ಮಾರ್ಗೋಪಾಯಗಳನ್ನು ಜನತೆಗೆ ತಿಳಿಸಿಕೊಡುವುದೇ ಅಭಿಯಾನ. ಸದ್ವಿಷಯದ ಪ್ರಚಾರೋಪನ್ಯಾಸ ಎಂದು ಹೇಳಬಹುದು.

ಪರಮಪೂಜ್ಯ ಸ್ವರ್ಣವಲ್ಲೀ ಮಠಾಧೀಶರಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಭಗವದ್ಗೀತಾಭಿಯಾನಕ್ಕಾಗಿ ಕಳೆದು ನಾಲ್ಕು ವರ್ಷಗಳಿಂದ ಎಷ್ಟು ಶ್ರಮಿಸಿದ್ದಾರೆಂದೂ, ಎಷ್ಟು ಮಾರ್ಗಗಳನ್ನು ಅನುಸರಿಸಿದ್ದಾರೆಂದೂ, ಎಷ್ಟು ಕಡೆ ಸಂಚಾರ

ಮಾಡಿ ಉಪನ್ಯಾಸಗಳನ್ನು ನೀಡಿದ್ದಾರೆಂದೂ ಡಾ. ಶ್ರೀರಾಮಭಟ್ಟರು ಸ್ಫುಟವಾಗಿ ನಿರೂಪಿಸಿದ್ದಾರೆ. ಜನತೆಯ ಸಮಗ್ರಕಲ್ಯಾಣವೇ ಈ ಅಭಿಯಾನದ ಪರಮ ಲಕ್ಷ್ಯವಾಗಿರುತ್ತದೆ. ಕರ್ನಾಟಕದಲ್ಲಿ ಹಿಂದೆ ಎಂದೂ ನಡೆಯದ ಈ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿದ ಶ್ರೀ ಶ್ರೀಗಳವರಿಗೆ ನಾವು ಕೃತಜ್ಞತೆಯಿಂದ ತಲೆಬಾಗಿಸಬೇಕು.

ಈ ಭಗವದ್ಗೀತಾಭಿಯಾನದ ಸಮಾರೋಪದ ಸ್ಮರಣೆಗಾಗಿ ಬರೆದ ಕೆಲವು ಲೇಖನಗಳ ಸಂಗ್ರಹ ಈ ಸ್ಮರಣ ಸಂಚಿಕೆಯಲ್ಲಿವೆ. ವಿದ್ವಜ್ಜನರು ಬರೆದ ಈ ಲೇಖನಗಳೆಲ್ಲವೂ ಸಂಗ್ರಹಯೋಗ್ಯವಾಗಿವೆ. ಇವುಗಳಲ್ಲಿ ಒಂದು ಲೇಖನವು ಸಂಸ್ಕೃತ ಭಾಷೆಯಲ್ಲಿಯೂ ಇನ್ನೆರಡು ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿಯೂ ಇರುವುದು ಗಮನಾರ್ಹ. ಈ ಗ್ರಂಥದಲ್ಲಿರುವ ಲೇಖನಗಳಲ್ಲಿ ಶ್ರೀಯುತ ಬನ್ನಂಜೆ ಗೋವಿಂದಾಚಾರ್ಯರು ಬರೆದ "ಮನಃಶಾಸ್ತ್ರದ ವಿಸ್ಮಯ – ಭಗವದ್ಗೀತೆ" ಎಂಬ ಲೇಖನವು ವಿಸ್ಮಯಕಾರಿ ಯಾಗಿರುವುದು ಹೌದು.

ಮನ್ವಾದಿ ಕೇಚಿತ್‌ಬ್ರುವತೇ ಹ್ಯಾಸ್ತಿಕಾದಿ ತಥಾ ಪರೇ । ತಥೋಪಚರಿತರಾದ್ಯನ್ಯೇ ಭಾರತಂ ಪರಿಚಕ್ಷತೇ ॥ ಎಂಬ ಶ್ಲೋಕದ ಅರ್ಥವು ಈ ವಿಸ್ಮಯಕ್ಕೆ ಕಾರಣವಾಗಿದೆ. ಮಹಾಭಾರತವು ಅತ್ಯಂತ ವಿಸ್ತೃತವಾದ ಗ್ರಂಥ. ಇದರ ಆರಂಭ ಎಲ್ಲಿಂದ ? ಎಂಬುದೇ ಪ್ರಶ್ನೆ. ಅದು ಮನ್ವಾದಿ, ಆಸ್ತಿಕಾದಿ, ಮತ್ತು ಉಪರಿಚರಾದಿ ಎಂದು ಮೂರು ಅಭಿಪ್ರಾಯಗಳಿವೆ. ಮನ್ವಾದಿ = ಮನು ಎಂಬಾತನಿಂದ ಭಾರತದ ಆರಂಭ, ಮನುವಿನ ವಂಶದಲ್ಲಿ ಹುಟ್ಟಿದ ಮತ್ಸ್ಯಕನ್ಯೆಯು ಕೌರವ ಪಾಂಡವರ ವಂಶಕ್ಕೆ ಆದಿಯಾದವಳು. ಆಸ್ತಿಕಾದಿ = ಜನಮೇಜಯನ ಸರ್ಪಯಾಗಕ್ಕೆ ಆಸ್ತೀಕನು ಬರುತ್ತಾನೆ. ಅಲ್ಲಿಂದ ಭರತದ ಆರಂಭ ಉಪರಿಚರಾದಿ = ಉಪರಿಚರನೆಂಬ ವಸುವಿನ ವಂಶದಲ್ಲಿ ಹಿಂದೆ ಹೇಳಿದ ಮತ್ಸ್ಯಕನ್ಯೆಯ ಜನನ. ಈ ಮೂರು ಪ್ರಕರಣಗಳಿಂದ ಮಹಾಭಾರತದ ಆರಂಭವಾಗಿದೆ ಎಂದು ಮತಭೇದಗಳಿವೆ. ಇದು ನಾನು ತಿಳಿದುಕೊಂಡ ಅರ್ಥ. ಶ್ರೀಮಾನ್ ಬನ್ನಂಜೆಯವರು ಈ ಶ್ಲೋಕಕ್ಕೆ ಹೇಳುವ ಅರ್ಥವು ಬೇರೆ, ಅವರ ಲೇಖನವನ್ನು ಓದಿ ನೋಡಿ.

ಶ್ರೀಮದ್ ಭಗವದ್ಗೀತಾ ಅಭಿಯಾನದ ಸಮಾರೋಪದ ಶುಭ ಸಂದರ್ಭದ ನೆನಪಿಗಾಗಿ ಪ್ರಕಟವಾಗುತ್ತಿರುವ ಗ್ರಂಥಕ್ಕೆ ಒಂದು ಸಂಪಾದಕೀಯವನ್ನು ಬರೆದುಕೊಡಬೇಕೆಂದು ಶ್ರೀ ಸ್ವರ್ಣವಲ್ಲೀ ಶ್ರೀ ಶ್ರೀಗಳವರು ನನಗೆ ಆದೇಶಿಸಿದರು. ಅವರ ಆದೇಶದಂತೆ ಈ ಎಲ್ಲ ಲೇಖನಗಳನ್ನು ಅವಲೋಕಿಸಿ, ಈ ಸಂಪಾದಕೀಯವನ್ನು ಬರೆಯಬೇಕಾಯಿತು. ಈ ಪ್ರಕಾರದಲ್ಲಿ ನನ್ನನ್ನು ಅನುಗ್ರಹಿಸಿದ ಪರಮಪೂಜ್ಯ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಪಾದಗಳಿಗೆ ಭಕ್ತಿಪೂರ್ವಕವಾದ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಗೀತಾ ಗ್ರಂಥವನ್ನು ಪಠಿಸಲು ಯಾರು ಅರ್ಹರು ಎನ್ನುವ ಪ್ರಶ್ನೆ ಸಾಮಾನ್ಯವಾಗಿ ಉದಯಿಸಬಹುದು. ನೀರನ್ನು ಕುಡಿಯಲು ಯಾರಿಗೆ ಅಧಿಕಾರವಿದೆ? ಬಾಯಾರಿಕೆಗೊಂಡವನಿಗೆ. ಅನ್ನವನ್ನು ತಿನ್ನಲು ಯಾರಿಗೆ ಅಧಿಕಾರವಿದೆ? ಹಸಿದವನಿಗೆ. ಔಷಧವನ್ನು ಸೇವಿಸಲು ಯಾರಿಗೆ ಅಧಿಕಾರವಿದೆ? ರೋಗಿಗೆ. ಆದ್ದರಿಂದ ಭವರೋಗದಿಂದ ಬಳಲುತ್ತಿರುವವರೆಲ್ಲರೂ ಗೀತಾಜ್ಞಾನೌಷಧ ಸೇವನೆಗೆ ಅಧಿಕಾರಿಗಳೇ ಆಗಿದ್ದಾರೆ. ಆದರೆ ಭವರೋಗ ಪೀಡಿತರು ಯಾರು ಎನ್ನುವ ಸಂದೇಹ ಬರುತ್ತದೆ. ಹುಟ್ಟಿದವರೆಲ್ಲರೂ ಭವರೋಗ ಪೀಡಿತರೇ. ಹುಟ್ಟು ಸಾವುಗಳೆಂಬ ಈ ಚಕ್ರಕ್ಕೆ ಸಿಲುಕಿದವರೆಲ್ಲ ಯಾವುದೋ ವಿಧವಾಗಿ ಈ ರೋಗದಿಂದ ಬಳಲುತ್ತಿರುವವರೇ ಆಗಿದ್ದಾರೆ. ಆದ್ದರಿಂದ ಜಾತಿ, ಮತ, ಕುಲ ಹಾಗೂ ವಯಸ್ಸು ಎನ್ನುವ ಭೇದಗಳಿಲ್ಲದೇ ಸರ್ವರೂ ಗೀತಾಪಠಣಕ್ಕೆ, ಗೀತಾಜ್ಞಾನೋಪಾಸನೆಗೆ ಅರ್ಹರೇ ಆಗಿದ್ದಾರೆ. ಆದರೆ ತನಗೆ ರೋಗವಿದೆಯೆಂದು ತಿಳಿದವನು ಮಾತ್ರವೇ ಔಷಧ ತೆಗೆದುಕೊಳ್ಳಲು ಪ್ರಯತ್ನಿಸುವನು. ಔಷಧದ ಮೇಲೆ, ವೈದ್ಯನ ಮೇಲೆ ವಿಶ್ವಾಸವಿರುವವನು ಮಾತ್ರವೇ ಔಷಧಕ್ಕೆ ಪ್ರಯತ್ನಪಟ್ಟ ಹಾಗೆ, ಜನನ, ಮರಣ ರೂಪದ ಸಂಸಾರ ವ್ಯಾಧಿಯಿಂದ ತಾನು ಬಳಲುತ್ತಿದ್ದೇನೆಂದು ತಿಳಿದ ಮನುಜನು ಮಾತ್ರವೇ ಗೀತಾದಿ ಸದ್ಗ್ರಂಥ ಪಠಣದ ಮೊರೆ ಹೋಗುವನು. ಶಾಸ್ತ್ರಗಳ ಮೇಲೆಯೂ ಅವುಗಳನ್ನು ಬೋಧಿಸಿದ ಪುಣ್ಯಪುರುಷರ ಮೇಲೆಯೂ ಅಚಲ ವಿಶ್ವಾಸ ಇರುವವನಿಗೆ ಮಾತ್ರ ಅವು ಉತ್ತಮವಾದ ಫಲಗಳನ್ನೀಯುವುವು.

**ಶ್ರೀಶ್ರೀಶ್ರೀ ವಿದ್ಯಾಪ್ರಕಾಶಾನಂದಗಿರಿ ಸ್ವಾಮಿಗಳು**
**ಶ್ರೀ ಶುಕಬ್ರಹ್ಮಾಶ್ರಮ, ಶ್ರೀ ಕಾಳಹಸ್ತಿ**

000000000160